ಅವರ ವಿಷಯದಲ್ಲಿ ಹೇಳಬೇಕಾದ್ದು ಏನೂ ಇಲ್ಲ. ತಜ್ಞರಿಂದ ಬರತಕ್ಕಂಥ ವರದಿಗಾಗಿ ಕಾದಿದ್ದೇವೆಯೇ ವಿನಃ ಬೇರೆ ಏನೂ ಇಲ್ಲ. ಒಂದು ಕಡೆ ಈ ರೀತಿಯಾದ ವರದಿ ಇದ್ದರೆ ಇನ್ನೊಂದು ಕಡೆ ಈ ರೀತಿಯಾದ ಅಪಘಾತವಾಗಿದೆ. ಆದ್ದರಿಂದ ತಜ್ಞರಿಂದ ವರದಿ ಬಂದರೆ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನವೀಯತೆಯ ದೃಷ್ಟಿಯಿಂದ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ರಾಚಯ್ಯ.—ಮಾನವೀಯತೆಯ ದೃಷ್ಟಿಯಿಂದಲೇ ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಸುಮಾರು ೬೫ ಜನ ಕಣ್ಣು ಆಪರೇಷನ್ ಆಗಿರುವವರ ಪೈಕಿ ಪರದಿ ಬಂದಿರುವ ಪ್ರಕಾರ ೪ ಜನರಿಗೆ ಮಾತ್ರ ಪೂರ್ಣವಾಗಿ ಕಣ್ಣು ಕಾಣುವುದಿಲ್ಲ ವೆಂದು ಹೇಳಿದ್ದಾರೆ. ಒಂದೊಂದೇ ಕಣ್ಣು ಆಪರೇಷನ್ ಮಾಡಿರುವುದು. ಇನ್ನೊಂದು ಕಣ್ಣನ್ನು ಆಪರೇಷನ್ ಮಾಡಿಲ್ಲ. ಆದಕ್ಕಾಗಿಯೇ ಪೂರ್ಣ ವಿಫರಕ್ಕೆ ನಾನು ಹೋಗುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಈ ದೃಷ್ಟಿಯಿಂದ ಸಾಧ್ಯವಾದ ಮಟ್ಟಿಗೆ ಯಾರು ಬಡವರು ಕಣ್ಣು ಕಳೆದು ಕೊಂಡಿರುತ್ತಾರೋ ಅವರ ಬಗ್ಗೆ ಅನುಕಂಪವಿಟ್ಟುಕೊಂಡು ಪರಿಹಾರವನ್ನು ಕೊಡಲು ಯಾವ ರೀತಿ ಪ್ರಯತ್ನ ಮಾಡಬೇಕೋ ಆ ರೀತಿ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

೨. ಲೋಕಸಭಾ ಸದಸ್ಯ ಡಾ. ವಿ. ವೆಂಕಟೇಶ್‌ರವರನ್ನು ಶೇಷಾದ್ರಿಪುರಂ ಪೋಲೀಸ್ ಠಾಣೆಯಂ ಆರಕ್ಷಕ ಉಪ ನಿರೀಕ್ಷಕರು ಥಳಿಸಿರುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ದಿನಾಂಕ ೬-೩-೧೯೮೮ರಂದು ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಅವರನ್ನು ಶೇಷಾದ್ರಿಪುರದ ಪೋಲೀಸ್ ಠಾಣೆಯ ಉಪ ನಿರೀಕ್ಷಕರು ಥಳಿಸಿರುವುದರ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ

ಶ್ರೀ ಆರ್ ಎಲ್. ಜಾಲಪ್ಪ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ ೬-೩-೧೯೮೮ರಂದು ಕೋಲಾರ ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಇವರು ತಮ್ಮ ಸಂಗಡಿಗರು ಸುಮಾರು ೨೫೦ ಜನರೊಂದಿಗೆ ''ರೈಲ್ ರೋಕೋ'' ಚಳುವಳಿ ಮಾಡಲು ಬೆಳಿಗ್ಗೆ ೮-೩೦ಕ್ಕೆ ನಗರ ರೈಲು ನಿಲ್ದಾಣದ ಬಳಿ ಬಂದಿದ್ದರು. ಚಳುವಳಿಯು ಸಮಯದಲ್ಲಿ ರಕ್ಷಣಾ ವ್ಯವಸ್ಥೆಗಾಗಿ ರೈಲ್ವೆ ಪೋಲೀಸ್‌ರು ಮತ್ತು ಇವರ ಬೆಂಬಲಕ್ಕಾಗಿ ನಗರ ಪೋಲೀಸರು ಸ್ಥಳದಲ್ಲಿ ಹಾಜರಿದ್ದರು. ಲಕ್ಷ್ಮೀಪುರಂ ಗೂಡಿಸಲುಗಳ ಹತ್ತಿರ ಶೇಷಾದ್ರಿಪುರಂ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ಚಂದ್ರೇಗೌಡ ತಮ್ಮ ಸಿಬ್ಬಂದಿಯೊಂದಿಗೆ ಗಸ್ತು ತಿರುಗುತ್ತಿದ್ದರು, ಆಗ ಚಳುವಳಿಗಾರರಲ್ಲಿ ಕೆಲವರು ಲಕ್ಷ್ಮೀಪುರಂ ಗೂಡಿಸಲಿನ ಬಳಿ ಹಳಿಯ ಮೇಲೆ ಕಲ್ಲಿನ ಬಂಡೆಗಳನ್ನು ಇಡುತ್ತಿದ್ದರು. ಸಬ್‌ಇನ್ಸ್‌ಪೆಕ್ಟರ್ ಚಂದ್ರೇಗೌಡ ಮತ್ತು ಕಾನ್ಸ್‌ಟೇಬಲ್ ಶ್ರೀ ರಾಮಾನಾಯಕ್, ಚಳುವಳಿಗಾರರು ಕಲ್ಲಿನ ಬಂಡೆಗಳನ್ನು ಹಳಿಗಳ ಮೇಲೆ ಇಡುವುದನ್ನು ತಪ್ಪಿಸಲು ಪ್ರಯತ್ನಪಟ್ಟಾಗ ಚಳುವಳಿಗಾರರ ಮತ್ತು ಪೋಲೀಸರ ನಡುವೆ ಎಳೆದಾಟ ನಡೆಯಿತು. ಉದ್ರಿಕ್ತಗೊಂಡ ಚಳುವಳಿಗಾರರನ್ನು ಹತೋಟಿಗೆ ತರಲು ಸಬ್ ಇನ್ಸ್‌ಪೆಕ್ಟರ್ ಬಲ ಉಪಯೋಗ ಮಾಡಬೇಕಾಗಿ ಬಂತು. ಈ ಎಳೆದಾಟದಲ್ಲಿ ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಹಳಿಯ ಮೇಲೆ ಬಿದ್ದರು, ಆಷ್ಟೊತ್ತಿಗೆ ರೈಲ್ವೆ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಡಾ. ವೆಂಕಟೇಶ್ ಮತ್ತು ಅವರ ಅನುಯಾಯಿಗಳನ್ನು ಪ್ರತಿಬಂಧಕ ದಸ್ತಗಿರಿ ಮಾಡಿ ಕರೆದುಕೊಂಡು ಹೋದರು.

ಮುಂದೆ ಡಾ. ವೆಂಕಟೇಶ್‌ರವರು ತಮ್ಮ ಎದೆಯಲ್ಲಿ ನೋವಿದೆಯೆಂದು ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಹೋಗಿದ್ದರು, ತಮ್ಮೊಂದಿಗೆ ಸಬ್ ಇನ್ಸ್‌ಪೆಕ್ಟರ್ ಚಂದ್ರೇಗೌಡ ಮತ್ತು ಕಾನ್ಸ್‌ಬೇಬಲ್ ರಾಮಾನಾಯ್ಕ ಅವಮರ್ಯಾದೆಯಿಂದ ವರ್ತಿಸಿ ದೌರ್ಜನ್ಯ ಮಾಡಿರುತ್ತಾರೆಂದು ಅರ್ಜಿಯನ್ನು ಕೊಟ್ಟಿರುತ್ತಾರೆ. ಸದರಿ ಅರ್ಜಿಯನ್ನು ಶೇಷಾದ್ರಿಪುರಂ ಸಹಾಯಕ ಪೋಲೀಸ್ ಕಮಿಷನರ್‌ರಿಂದ

ವಿಚಾರಣೆ ಮಾಡಿಸಿ ವರದಿಯನ್ನು ಪಡೆದು ಆಪಾದಿತ ಸಬ್‌ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ರವರನ್ನು ದಂಡನಡತೆಗಾಗಿ ದಿನಾಂಕ ೭-೩-೧೯೮೮ ರಂದು ಅಮಾನತ್ತಿನಲ್ಲಿಡಲಾಗಿದೆ. ಇವರಿಬ್ಬರ ಮೇಲೆ ಇಲಾಖಾ ವಿಚಾರಣೆಯನ್ನು ಮಾಡಲಾಗುತ್ತಿದೆ, ಡಾ. ವೆಂಕಟೇಶ್‌ರವರು ೪ ದಿನಗಳ ಕಾಲ ಬೌರಿಂಗ್ ಆಸ್ಪತ್ರೆಯಲ್ಲಿ ಉಪಚಾರ ಹೊಂದಿದರು. ಅವರ ಮೇಲೆ ತೆಗೆಯಲಾದ ಕ್ಷ-ಕಿರಣ ಪರೀಕ್ಷಿಸಿದಾಗ, ಎದೆಯಲ್ಲಿರುವ ಮೇಲಿನ ಮೂಳೆಯಲ್ಲಿ ಸೂಕ್ಷ್ಮವಾದ ಬಿರುಕು ಕಂಡುಬಂದಿದೆ. ವೈದ್ಯಾಧಿಕಾರಿಗಳಿಂದ ಅಂತಿಮ ಅಭಿಪ್ರಾಯವನ್ನು ಪಡೆಯಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕಕ್ಕೆ ಕೇಂದ್ರದ ರೈಲ್ವೆ ಇಲಾಖೆಯವರು ತಾರತಮ್ಯ ಮಾಡುತ್ತಾರೆ ಮತ್ತು ಹೊಸದಾಗಿ ಯಾವ ರೈಲ್ವೆ ಲೈನನ್ನು ಹಾಕಲಿಲ್ಲವೆಂದು ಸುಮಾರು ೨೫೦ ಜನರು ಹೋಗಿ ಸತ್ಯಾಗ್ರಹ ಮಾಡುತ್ತಿರುವಾಗ ಸಬ್ ಇನ್ಸ್‌ಪೆಕ್ಟರ್‌ರವರು ವೆಂಕಟೇಶ್‌ರವರನ್ನು ತಳ್ಳಿದ್ದಾರೆಂದು ಹೇಳುತ್ತಿದ್ದಾರೆ. ಅದು ತಳ್ಳಿರುವುದು ಅಲ್ಲ. ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ 'ಎದೆಯಲ್ಲಿರುವ ಮೇಲಿನ ಮೂಳೆಯಲ್ಲಿ ಸೂಕ್ಷ್ಮವಾದ ಬಿರುಕು ಕಂಡು ಬಂದಿದೆ' ಎಂದು ಹೇಳಿದ್ದಾರೆ. ಇದು ತಳ್ಳಿದಾಗ ಆದದ್ದಲ್ಲ. ಶಾಸಕರೇ ತಮ್ಮ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಪೋಲೀಸರು ನನ್ನ ಮೇಲೆ ಲಾಠಿ ಚಾರ್ಜ್ ಮಾಡಿದರು ಎಂದು. ಪಾಪ ಜಾಲಪ್ಪನವರು ಗೃಹ ಮಂತ್ರಿಗಳಾಗಿರತಕ್ಕ ಕಾಲದಲ್ಲಿ ಪಾರ್ಲಿಮೆಂಟ್ ಸದಸ್ಯರೊಬ್ಬರು ಪೋಲೀಸರ ಏಟು ತಿಂದು ಎದೆ ಮೇಲಿನ ಮೂಳೆ ಮುರಿಯಿತು ಎಂದರೆ ಪೋಲೀಸ್ ವ್ಯವಸ್ಥೆಯನ್ನು ಯಾವ ರೀತಿ ಇಟ್ಟಿದ್ದೀರಿ ಎಂದು ಕೇಳಬೇಕಾಗುತ್ತದೆ, ಅವರಿಗೇನು ಮನುಷ್ಯತ್ವ ಇದೆಯೇ ಅಥವಾ ರಾಕ್ಷಸರಾಗುತ್ತಿದ್ದಾರೆಯೇ ? ಇಂಥ ಪ್ರಕರಣಗಳ ಬಗ್ಗೆ ಅನೇಕ ಸಾರಿ ಹೇಳಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಡಾಕ್ಟರ್ ವೆಂಕಟೇಶ್ ಅವರನ್ನು ನಾನು ಆಸ್ಪತ್ರೆಗೆ ಹೋಗಿ ಭೇಟಿ ಮಾಡಿದ್ದೇನೆ, ಮುಖ್ಯ ಮಂತ್ರಿಗಳು ಸಹ ಭೇಟಿ ಮಾಡಿದ್ದರು. ಅವರೇ ಹೇಳಿದರು, ನನ್ನನ್ನು ಹಿಂದಕ್ಕೆ ತಳ್ಳಿದರು, ಹಾಗೆ ತಳ್ಳಿದಾಗ ಕೆಳಗೆ ಬಿದ್ದೆ ಬಿದ್ದ ಮೇಲೆ ಲೋಕಸಭಾ ಸದಸ್ಯನೆಂದು ಹೇಳಿದರೂ ಗಣನೆಗೆ ತೆಗೆದುಕೊಳ್ಳಲಿಲ್ಲವೆಂದರು. ನಾನು ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿ ಎಂದು ತಕ್ಷಣ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ. ಅವರಿಗೆ ಅದು ಹೊಡೆದು ಗಾಯವಾಗಿರ ವುದಲ್ಲ. ಬಿದ್ದಾಗ ಕ್ರಾಕ್ ಬಂದಿರುವುದು ನಾವು ಈಗ ಹೇಳುತ್ತಿರುವುದು ಮಾತ್ರ ಸತ್ಯಕ್ಕೆ ದೂರವಾದ ಮಾತು. ನಾನು ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಂಡಿದ್ದೇನೆ. ಪಬ್ಲಿಕ್ ಪ್ರಾಪರ್ಟಿ ಡ್ಯಾಮೇಜ್ ಆಗುವಾಗ ಕೆಲವೊಮ್ಮೆ ಅನಿವಾರ್ಯವಾಗಿ ಇಂಥ ಘಟನೆಗಳು ಆಗುತ್ತವೆ. ಅವರು ೩-೪ ಸಾರಿ ರೌಂಡ್ ರೋಬೋ ಮಾಡಿದ್ದಾರೆ. ಅನಿವಾರ್ಯವಾಗಿ ಅವರಿಗೆ ತೊಂದರೆಯಾಗಿರುವುದಕ್ಕೆ ವಿಷಾದಿಸುತ್ತೇನೆ ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಮನಷ್ಯತ್ವ ಇಲ್ಲವೆಂದರು. ಇದು ಕಮ್ಯುನಿಸ್ಟರಾಗಿ ಅವರು ಹೇಳಬೇಕಾದ ಮಾತೇ ಹೊರತು ಅವರಲ್ಲಿ ನಾನು ಆ ಮಾತನ್ನು ಹೇಳುವುದಕ್ಕಾಗುತ್ತದೆಯೆ ?

ಶ್ರೀ ಆರ್. ವೆಂಕಟರಾಮಯ್ಯ.—ಡಾ. ವೆಂಕಟೇಶ್ ಅವರೇ ಸ್ಪಷ್ಟವಾಗಿ ಎಲ್ಲಾ ಪತ್ರಿಕೆಗಳಲ್ಲೂ ಹೇಳಿಕೆ ಕೊಟ್ಟಿದ್ದಾರೆ, ಅವರ ಹೇಳಿಕೆ ಪ್ರಕಾರ ಎರಡು ಲಾಠಿ ಏಟು ಕೊಟ್ಟು ಎದೆ ಮೇಲೆ ಗುದ್ದಿದರು ಎಂದು ಬಂದಿದೆ. ಈಗ ಇವರು ಟ್ರಸ್ಟ್ ಮಾಡಿ ಕೆಳಗೆ ಬಿದ್ದರು, ಆದಕ್ಕೆ ಸ್ಟ್ರಕ್ಚರ್ ಆಯಿತು ಎಂದು ಹೇಳುವುದು ಸರಿಯಲ್ಲ. ಏಕೆ ಈ ರೀತಿ ಡಿಫೆಂಡ್ ಮಾಡುತ್ತಾರೋ ಅರ್ಥವಾಗುತ್ತಿಲ್ಲ. ಈ ರೀತಿ ಡಿಫೆಂಡ್ ಮಾಡುತ್ತಾರೋ ಅರ್ಥವಾಗುತ್ತಿಲ್ಲ ಈ ರೀತಿ ಬಟ್ಟರೆ ಯಾರಿಗೂ ಸೇಫ್ಟಿ ಇಲ್ಲ. ಈ ರೀತಿ ಆಗಬಾರದು ಮಾನ್ಯ ಜಾಲಪ್ಪನವರು ಪೋಲೀಸರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಜನತೆ ಯಾವ ರೀತಿ ಬದುಕಬೇಕು ? ಘಟನೆಯಿತರನ್ನು ಹಿಡಿಯುವುದಕ್ಕೆ ಇವರಿಂದ ಆಗುವುದಿಲ್ಲ. ಎಂ.ಪಿ.ಗಳು ಸತ್ಯಾಗ್ರಹ ಮಾಡಿದರೆ ಹೊಡೆಯುವುದಕ್ಕೆ ಹೋಗುತ್ತಾರೆ. ಈ ಬಗ್ಗೆ ತುರ್ತು ಕ್ರಮ ತೆಗೆದುಕೊಂಡು ತಕ್ಕ ಶಿಕ್ಷೆ ಕೊಡಬೇಕು ಸಸ್ಪೆಂಡ್ ಮಾಡುವುದು, ಇಲಾಖೆಯ ವಿಚಾರಣೆ ಮಾಡುವುದು, ನಂತರ ರಿಪೋರ್ಟ್ ಮಾಡುವುದು ಇಂಥದ್ದೇ ಆಗುತ್ತದೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ತಪ್ಪಿತಸ್ಥರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಬಲಿ ಹಾಕಿದರೆ ಇತರ ಪೋಲೀಸರಿಗೆ ಭಯ ಬರುತ್ತದೆ. ಸಬ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದಕ್ಕೆ ಪೋಲೀಸರು ಸತ್ಯಾಗ್ರಹ ಮಾಡಿದರು. ಪರಿಸ್ಥಿತಿ ಹೀಗಾಗಿದೆ. ಇದನ್ನು ಸರಿಪಡಿಸುತ್ತೀರೋ ಬಿಡುತ್ತೀರೋ ಗೊತ್ತಿಲ್ಲ.

ಶ್ರೀ ಆರ್. ಎಚ್. ಜಾಲಪ್ಪ.— ಅಧ್ಯಕ್ಷರೇ, ಹೇಳಬೇಕಾದ್ದನ್ನೆಲ್ಲಾ ನಾನು ಈಗಾಗಲೇ ಹೇಳಿದ್ದೇನೆ. ಸಸ್ಪೆಂಡ್ ಮಾಡಿದಹಾಗೆ ಮಾಡಿ ಒಂದು ತಿಂಗಳಲ್ಲಿ ಮತ್ತೆ ರಿವೋಕ್ ಮಾಡುತ್ತಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಈ ಬೂಟಾಟಿಕೆ ನನಗೆ ಗೊತ್ತಿಲ್ಲ, ನನಗೆ ಅದು ಅನಾವಶ್ಯಕ. ತಪ್ಪಿತಸ್ಥ ಅಧಿಕಾರಿಗಳನ್ನು ಯಾವುದೇ ಕಾರಣದಿಂದ ಸೇಫ್‌ಗಾರ್ಡ್ ಮಾಡುವುದು ಅನಾವಶ್ಯಕ. ಕಾನೂನು ಪ್ರಕಾರವಾಗಿ ಏನು ಶಿಕ್ಷೆ ಕೊಡಬೇಕೋ ಅದನ್ನು ಕೊಡುತ್ತೇವೆ ಎಂಬ ಭರವಸೆ ಕೊಡುತ್ತೇನೆ. ಅವರು ಹೇಳಿದರು ಪೋಲೀಸರು ಎಂ.ಪಿ ಗೇ ಹೀಗೆ ಮಾಡಿದರೆ ಬೇರೆಯವರ ಗತಿ ಏನು ಎಂದು. ನಿಮಗೇನೂ ಆಗುವುದಿಲ್ಲ ಎಂದು ನಾನು ಅವರಿಗೆ ಭರವಸೆ ಕೊಡುತ್ತೇನೆ.

ನಿಯಮ ೩೩ಳಿರ ಮೇರೆಗೆ

೧. ಸಹಕಾರ ಸಂಘಗಳಿಂದ ರೈತರು ಪಡೆದ ಸಾಲದ ಮೇಲಿನ ಬಡ್ಡಿ ಸಂಸ್ಥಿ ಬಡ್ಡಿ ಮನ್ನಾ ಮಾಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಕರ್ನಾಟಕ ರಾಜ್ಯದ ಸಹಕಾರ ಸಂಘಗಳಿಂದ ಪಡೆದ ರೈತರ ಬಡ್ಡಿ, ಸಂಸ್ಥಿ ಬಡ್ಡಿ ಮನ್ನಾ ಮಾಡಿ ಸರ್ಕಾರ ಆಜ್ಞೆ ಹೊರಡಿಸಿದ್ದು ರಾಜ್ಯಪಾಲರ ಭಾಷಣದಲ್ಲಿ ಅಸಲು ಕಟ್ಟುವ ಅವಧಿಯನ್ನು ೩೦-೬-೧೯೮೮ರ ವರೆಗೆ ಅವಧಿ ಕೊಡುವುದಾಗಿ ತಿಳಿಸಿ ಸರ್ಕಾರಿ ಆಜ್ಞೆಯಲ್ಲಿ ಕೇವಲ ಇದರ ಅವಧಿ ೩೧-೩-೧೯೮೮ ಎಂದು ತಿಳಿಸಿ ೩೦-೬-೧೯೮೮ಕ್ಕೆ ಸುಸ್ಥಿ ಆದ ರೈತರಿಗೆ ಮಾತ್ರ ಈ ಸೌಲಭ್ಯವೆಂದು ತಿಳಿಸಿದೆ. ಈಗ ಸಹಕಾರಿ ಕಚೇರಿಯು ೮-೩-೧೯೮೮ ರಂದು ಒಂದು ಪತ್ರಿಕಾ ಹೇಳಿಕೆ ಕೊಟ್ಟು ೧೯೮೭-೮೮ನೇ ಸಾಲಿನ ರೈತರಿಗೂ ಈ ಸೌಲಭ್ಯ ವಿಸ್ತರಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಆದರೆ ಅವಧಿ ಬಹಳ ಕಡಿಮೆ ಇರುವುದರಿಂದ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವಂತೆ ಈ ಅವಧಿ ೩೦-೬-೧೯೮೮ರ ವರೆಗೆ ವಿಸ್ತರಿಸುವ ಬಗ್ಗೆ ಮತ್ತು ೧೯೮೭-೮೮ನೇ ಸಾಲಿನಲ್ಲಿ ಬರಗಾಲಕ್ಕೆ ತುತ್ತಾಗಿ ಶೇಕಡ ೨೫ಕ್ಕೂ ಕಡಿಮೆ ಬೆಳೆ ಬಂದಿರುವ ರೈತರ ಸಾಲವನ್ನು ಬಡ್ಡಿರಹಿತ ದೀರ್ಘಾವಧಿ ಸಾಲವಾಗಿ ಪರಿವರ್ತಿಸಬೇಕೆಂದೂ ಮತ್ತು ಈ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ ಎಂಬ ಬಗ್ಗೆ ಸರ್ಕಾರದ ಹೇಳಿಕೆ ಪಡೆಯಬಯಸುತ್ತೇನೆ.

ಶ್ರೀ ಎಚ್. ವಿಶ್ವಾನಾಥಯ್ಯ (ಸಹಕಾರ ಮಂತ್ರಿಗಳು).—ರಾಜ್ಯದ ರೈತರು ತಾವು ಪಡೆದ ಸಹಕಾರಿ ಕೃಷಿ ಸಾಲಗಳ ಬಾಬ್ತು ಅಸಲು ಮೊಬಲಗು ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯುವ ಬಗ್ಗೆ ಸರ್ಕಾರ ಈಗಾಗಲೇ ೨ ಆದೇಶಗಳನ್ನು ಹೊರಡಿಸಿದೆ. ಸದರಿ ಆದೇಶಗಳ ಪ್ರಕಾರ ೩೦-೬-೧೯೮೮ಕ್ಕೆ ಸುಸ್ಥಿಯಾದ ಸಾಲಗಳ ಬಾಬ್ತು ಪೂರ ಅಸಲನ್ನು ೩೧-೩-೧೯೮೮ ರೊಳಗೆ ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯಬಹುದಾಗಿದೆ. ಮುಂತ್ತು ೧೯೮೭-೮೮ನೇ ಚಾಲ್ತಿ ಸಾಲಿನ ಕಂತು ಇಲ್ಲವೆ ಸಾಲಗಳ ಬಾಬ್ತು ಅಸಲನ್ನು ನಿಗದಿತ ಕಾಲದಲ್ಲಿ ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯಬಹುದಾಗಿದೆ, ಸದರಿ ಸುಸ್ಥಿ ಇಲ್ಲವೆ ಚಾಲ್ತಿ ಸಾಲಗಳನ್ನು ಮರುಪಾವತಿ ಮಾಡುವ ಅವಧಿಯನ್ನು ಸರ್ಕಾರ ವಿಸ್ತರಿಸಲು ಬಯಸುವುದಿಲ್ಲ. ೧೯೮೭-೮೮ರ ಸಾಲಿನಲ್ಲಿ ಶೇಕಡ ೨೫ಕ್ಕಿಂತ ಕಡಿಮೆ ಬೆಳೆ ಬಿದ್ದ ಪ್ರದೇಶಗಳಲ್ಲಿನ ರೈತರು ನಬಾರ್ಡಿನವರ ಸೂಚನೆಗಳ ಪ್ರಕಾರ ತಮ್ಮ ಸಾಲಗಳನ್ನು ಮಧ್ಯಮಾವಧಿ ಪರಿವರ್ತಿತ ಸಾಲಗಳನ್ನಾಗಿ ಮಾರ್ಪಡಿಸಿಕೊಳ್ಳಲು ಮಾತ್ರ ಅರ್ಹರಿರುತ್ತಾರೆ.

೨) ರಾಜ್ಯದ ತೋಟದ ಬೆಳೆಗಾರರ ಸಂಘದವರು ರೈತರಿಂದ ಆಲೂಗಡ್ಡೆಯನ್ನು ಕೊಂಡುಕೊಳ್ಳುವ ಬಗ್ಗೆ

SRI R. VENKATARAMAIAH (Mulubagil).—The society with several selling outlets (KIOSKS) Vegetable & Fruit Growers' Association's Co-op, Society run under the supervision of the Horticultural Department is not buying from the grower's, the potatoes, the prices of which has slumped like anything resulting in heavy loss to growers